# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** ಬೆಂಗಳೂರು ಹಾಗೂ ಮಹಾನಗರ ಪಾಲಿಕೆ ವ್ಯಾಪ್ತಿಗಳಲ್ಲಿ ದುಡಿಯುವ ಮಹಿಳೆಯರ ಸುರಕ್ಷತೆಯ ದೃಷ್ಠಿಯಿಂದ ಮಹಿಳೆಯರಿಗಾಗಿ ತಲಾ ರೂ.02.00ಕೋಟಿ ವೆಚ್ಚದಲ್ಲಿ 10 ಉದ್ಯೋಗಸ್ಥ ಮಹಿಳೆಯರ ಹಾಸ್ಟೆಲ್‌ಗಳನ್ನು ತೆರೆಯಲು ಆದೇಶ ಹೊರಡಿಸುವ ಕುರಿತು.

**ಓದಲಾಗಿದೆ:** 1. 2017-18ನೇ ಸಾಲಿನ ಆಯವ್ಯಯ ಭಾಷಣ **ಕಂಡಿಕೆ:216.**

2. ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು ಇವರ ಏಕಕಡತದ ಪ್ರಸ್ತಾವನೆ ಸಂಖ್ಯೆ:ಅಸಂನಿ/ಆಯವ್ಯಯ ಭಾಷಣ/ ಸಿಆರ್-178/2016-17 ದಿನಾಂಕ: 01-04-2017.

*~*~*~*~*~*

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು 2017-18ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-216ರಲ್ಲಿ **"ಬೆಂಗಳೂರು ಹಾಗೂ ಮಹಾನಗರ ಪಾಲಿಕೆ ವ್ಯಾಪ್ತಿಗಳಲ್ಲಿ ದುಡಿಯುವ ಮಹಿಳೆಯರ ಸುರಕ್ಷತೆಯ ದೃಷ್ಠಿಯಿಂದ ಮಹಿಳೆಯರಿಗಾಗಿ ತಲಾ ರೂ.02.00 ಕೋಟಿ ವೆಚ್ಚದಲ್ಲಿ 10 ಉದ್ಯೋಗಸ್ಥ ಮಹಿಳೆಯರ ಹಾಸ್ಟೆಲ್‌ಗಳನ್ನು ತೆರೆಯಲಾಗುವುದು"** ಎಂದು ಘೋಷಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿನ ಪತ್ರದಲ್ಲಿ ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯ ರವರು ಅಲ್ಪಸಂಖ್ಯಾತರ ನಿರ್ದೇಶನಾಲಯದಿಂದ ಮೆಟ್ರಿಕ್ ಪೂರ್ವ, ಮೆಟ್ರಿಕ್ ನಂತರ ವಸತಿ ನಿಲಯಗಳನ್ನು ಸರ್ಕಾರದ ವತಿಯಿಂದ ನಡೆಸಲಾಗುತ್ತಿದೆ. ಆದರೆ ಅಲ್ಪಸಂಖ್ಯಾತರ ಉದ್ಯೋಗಸ್ಥ ಮಹಿಳೆಯರಿಗೆ ಯಾವುದೇ ರೀತಿಯ ವಸತಿ ನಿಲಯಗಳು ಲಭ್ಯವಿರುವುದಿಲ್ಲ. ರಾಜ್ಯದಲ್ಲಿ ಸರ್ಕಾರಿ/ಸರ್ಕಾರೇತರ ಹಾಗೂ ಖಾಸಗಿ ವಲಯಗಳಲ್ಲಿ ಮಹಿಳೆಯರಿಗೆ ಸಾಕಷ್ಟು ಉದ್ಯೋಗವಕಾಶ ಲಭ್ಯವಿರುತ್ತದೆ. ಅಲ್ಪಸಂಖ್ಯಾತರ ಮಹಿಳೆಯರನ್ನು ಆರ್ಥಿಕ ಹಾಗೂ ಸಾಮಾಜಿಕ ಭದ್ರತೆ ನೀಡಿ ಸಮಾಜದ ಮುಖ್ಯ ವಾಹಿನಿಗೆ ತರುವ ಹಿನ್ನೆಲೆಯಲ್ಲಿ ಗ್ರಾಮೀಣ ಹಾಗೂ ಪಟ್ಟಣ ಭಾಗದ ಅಲ್ಪಸಂಖ್ಯಾತರ ಮಹಿಳೆಯರು ಉದ್ಯೋಗವಕಾಶ ಪಡೆಯಲು ತಮ್ಮ ಮನೆಗಳನ್ನು ತೊರೆದು ಪಟ್ಟಣಗಳಲ್ಲಿ ಉದ್ಯೋಗವನ್ನು ಪಡೆದು, ಆರ್ಥಿಕವಾಗಿ ಬೆಳವಣಿಗೆ ಹೊಂದು ಪಟ್ಟಣಗಳಲ್ಲಿ ಬಂದು ನೆಲೆಸುತ್ತಾರೆ. ಈ ನಿಟ್ಟಿನಲ್ಲಿ ಮಹಿಳೆಯರು ತಮ್ಮ ವಾಸಕ್ಕಾಗಿ ಸೂಕ್ತ ವಾಸಸ್ಥಳಕ್ಕಾಗಿ ಪರದಾಡಬೇಕಾಗಿರುತ್ತದೆ ಹಾಗೂ ದುಡಿಯುವ ಮಹಿಳೆಯರ ಭದ್ರತೆ ಹಾಗೂ ಸುರಕ್ಷತೆಯ ದೃಷ್ಠಿಯಿಂದ ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯಗಳನ್ನು ಪ್ರಾರಂಭಿಸಿದ್ದಲ್ಲಿ, ಹಲವು ಅಲ್ಪಸಂಖ್ಯಾತರ ಹೆಣ್ಣು ಮಕ್ಕಳು/ಮಹಿಳೆಯರಿಗೆ ಅನುಕೂಲವಾಗುತ್ತದೆ. ಆದುದರಿಂದ, 2017-18ನೇ ಸಾಲಿನಲ್ಲಿ ಘೋಷಿಸಿರುವಂತೆ, ಬೆಂಗಳೂರು ಹಾಗೂ ಮಹಾನಗರ ಪಾಲಿಕೆ ವ್ಯಾಪ್ತಿಗಳಲ್ಲಿ ದುಡಿಯುವ ಮಹಿಳೆಯರ ಸುರಕ್ಷತೆಯ ದೃಷ್ಠಿಯಿಂದ ಮಹಿಳೆಯರಿಗಾಗಿ ತಲಾ ರೂ.02.00 ಕೋಟಿ ವೆಚ್ಚದಲ್ಲಿ 10 ಉದ್ಯೋಗಸ್ಥ ಮಹಿಳೆಯರ ಹಾಸ್ಟೆಲ್‌ಗಳನ್ನು ತೆರೆಯುವ ಬಗ್ಗೆ ಏಕಕಡತ ಪದ್ಧತಿಯನ್ವಯ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

....2

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: MWD 195 MDS 2017, ದಿನಾಂಕ:23-06-2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2017-18ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-216ರಲ್ಲಿ ಘೋಷಿಸಿರುವಂತೆ, ಬೆಂಗಳೂರು ಹಾಗೂ ಮಹಾನಗರ ಪಾಲಿಕೆ ವ್ಯಾಪ್ತಿಗಳಲ್ಲಿ ದುಡಿಯುವ ಮಹಿಳೆಯರ ಸುರಕ್ಷತೆಯ ದೃಷ್ಟಿಯಿಂದ ಮಹಿಳೆಯರಿಗಾಗಿ ಈ ಕೆಳಕಂಡ 9 ಸ್ಥಳಗಳಲ್ಲಿ ಕಟ್ಟಡ ನಿರ್ಮಾಣಕ್ಕೆ ತಲಾ ರೂ.170.00ಲಕ್ಷಗಳು ಮತ್ತು ಮೂಲಭೂತ ಸೌಕರ್ಯಕ್ಕೆ ತಲಾ 30.00ಲಕ್ಷಗಳ ವೆಚ್ಚದಲ್ಲಿ 10 ಉದ್ಯೋಗಸ್ಥ ಮಹಿಳೆಯರ ಹಾಸ್ಟೆಲ್‌ಗಳನ್ನು ಕೆಳಗೆ ಸೂಚಿಸಿರುವ ಅಗತ್ಯ ಸಿಬ್ಬಂದಿಯೊಂದಿಗೆ ಸೃಜಿಸಿ, ತೆರೆಯಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಸರ್ಕಾರದ ಮಂಜೂರಾತಿ ನೀಡಿ ಆದೇಶಿಸಿದೆ.

**10 ಉದ್ಯೋಗಸ್ಥ ಮಹಿಳೆಯರ ವಸತಿನಿಲಯಗಳ ವಿವರ.**

| ಕ್ರ. ಸಂ | ಜಿಲ್ಲೆ | ಸಂಖ್ಯಾಬಲ | ವಸತಿ ನಿಲಯಗಳ ಸಂಖ್ಯೆ |
|---|---|---|---|
| 1 | ಬೆಂಗಳೂರು ನಗರ | 75 | 2 |
| 2 | ಕಲಬುರಗಿ | 50 | 1 |
| 3 | ಮೈಸೂರು | 50 | 1 |
| 4 | ಬೆಳಗಾಂ | 50 | 1 |
| 5 | ಧಾರವಾಡ /ಹುಬ್ಬಳ್ಳಿ | 50 | 1 |
| 6 | ದಕ್ಷಿಣ ಕನ್ನಡ | 50 | 1 |
| 7 | ಶಿವಮೊಗ್ಗ | 50 | 1 |
| 8 | ದಾವಣಗೆರೆ | 50 | 1 |
| 9 | ತುಮಕೂರು | 50 | 1 |
| | ಒಟ್ಟು | | 10 |

**10 ಅಲ್ಪಸಂಖ್ಯಾತರ ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯಗಳಲ್ಲಿ ಹುದ್ದೆಗಳನ್ನು ಸೃಜಿಸಿ ಭರ್ತಿ ಮಾಡಲು ಮಂಜೂರಾದ ಏಕರೂಪ ಹುದ್ದೆಗಳ ವಿವರ**

| ಕ್ರ. ಸಂ | ಹುದ್ದೆಗಳ ಪದನಾಮ | ಸೃಜಿಸಬೇಕಾದ ಹುದ್ದೆಗಳ ಸಂಖ್ಯೆ (ಪ್ರತಿ ಹಾಸ್ಟೆಲ್‌ಗೆ 01 ಸಿಬ್ಬಂದಿ ಯಂತೆ 10 ಹಾಸ್ಟೆಲ್‌ಗೆ ) | ವೇತನ ಶ್ರೇಣಿ (ರೂಗಳಲ್ಲಿ) | ನೇಮಕಾತಿ ವಿಧಾನ |
|---|---|---|---|---|
| 1. | ನಿಲಯ ಪಾಲಕರು (ಮಹಿಳೆ) | 10 | 14550-26700 | ಸಿ&ಆರ್ ನಿಯಮದಂತೆ |
| 2. | ಅಡುಗೆಯವರು | 20 | 10400-16400 | ಹೊರಗುತ್ತಿಗೆ |
| 3. | ಅಡುಗೆ ಸಹಾಯಕರು | 10 | 9600-14550 | ಹೊರಗುತ್ತಿಗೆ |
| 4. | ಕಾವಲುಗಾರರು | 20 | 9600-14550 | ಹೊರಗುತ್ತಿಗೆ |
| | ಒಟ್ಟು | 60 | | |

....3